ದಿನಾಂಕಃ 15.10.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು: ವಾದಿ ಪರ ಶ್ರೀ ಕೆ.ಸಿ.ಸಿ. ವಕೀಲರಿಂದ:</u>**

ಮರ್ಕಲ್ ಗ್ರಾಮದ ಸ.ನಂ.5 ರ ಒಟ್ಟು ವಿಸ್ತೀರ್ಣ ಎಷ್ಟೆಂದು ನನಗೆ ಗೊತ್ತಿಲ್ಲ. ಸದರಿ ಸ.ನಂ. ನ ಖಾತಾಧಾರನ ಹೆಸರನ್ನು ನನ್ನಿಂದ ಹೇಳಲು ಆಗುವುದಿಲ್ಲ. ಸಾಕ್ಷಿಯು ಸ್ವತಃ ಸದರಿ ಸ.ನಂ. ನಲ್ಲಿ ನನಗೆ 2 ಎಕರೆ 9 ಗುಂಟೆ ಜಮೀನು ಹಾಗೂ 5 ಗುಂಟೆಯ ಮತ್ತೊಂದು ಜಮೀನು ಇದೆ ಎಂದು ನುಡಿಯುತ್ತಾರೆ. ಗೌರಮ್ಮ ಎನ್ನುವವರು ನನ್ನ ಅತ್ತೆ ಹಾಗೂ ತಿಮ್ಮಮ್ಮ ನನ್ನ ತಾಯಿ. ಸ.ನಂ.5 ರಲ್ಲಿ 2 ಎಕರೆ 9 ಗುಂಟೆ ಜಮೀನು ಹಾಗೂ 5 ಗುಂಟೆಯ ಮತ್ತೊಂದು ಜಮೀನಿನ ಪಹಣಿ ನನ್ನ ತಂದೆಯ ಮರಣಾನಂತರ ನನ್ನ ತಾಯಿಯ ಹೆಸರಿಗೆ ನನ್ನ ಹಾಗೂ ನನ್ನ ಸಹೋದರನ ಹೆಸರಿಗೆ ಜಂಟಿಯಾಗಿ ದಾಖಲಾಗಿದೆ. ಸದರಿ ಜಮೀನಿನ ಪೈಕಿ 2 ಎಕರೆ 5 ಗುಂಟೆ ಜಮೀನನ್ನು ನಾವು ವಾದಿಗೆ ಮಾರಾಟ ಮಾಡಿದ್ದೇವೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-3 ರಲ್ಲಿ ನನ್ನ ಸಹಿ ಇದೆ ಎಂದರೆ ಸರಿಯಲ್ಲ. ನಿಪಿ-3 ರಂತೆ ವಾದಿಯ ಹೆಸರಿಗೆ ಬರೆದುಕೊಟ್ಟ ಕ್ರಯಪತ್ರದಲ್ಲಿ ನಾನು ಸಹಾ ಸಹಿ ಮಾಡಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-3 ರ ನೋಂದಾಯಿತ ಕ್ರಯಪತ್ರದಡಿ ನಾನು ಮತ್ತು ಗೌರಮ್ಮ ಎನ್ನುವವರು ದಾವ ಜಮೀನನ್ನು ವಾದಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ.

ನನಗೆ ಕನ್ನಡ ಭಾಷೆ ಓದಲು ಬರುತ್ತದೆ ಹಾಗೂ ಬರೆಯಲು ಸ್ವಲ್ಪ ಮಟ್ಟಿಗೆ ಬರುತ್ತದೆ. ನನ್ನ ಬರವಣಿಗೆಯಲ್ಲಿ ನಾನು ಪೋಲಿಸರಿಗೆ ದೂರು ಕೊಟ್ಟಿಲ್ಲ ಆದರೆ ದೂರನ್ನು ಬರೆಸಿ ಕೊಟ್ಟಿದ್ದೇನೆ. ನಿಪಿ-1 ರಂತೆ ದಾವ ಜಮೀನಿನ ಪಹಣಿ ವಾದಿಯ ಹೆಸರಿಗೆ ಇದೆ ಎಂದರೆ ಸರಿ. ವಾದಿಯ ಹೆಸರಿಗೆ ಆದ ಪಹಣಿಯನ್ನು ಪ್ರಶ್ನಿಸಿ ನಾನು ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ. ನಾನು ವಾದಿಗೆ ಯಾವುದೇ ಕ್ರಯಪತ್ರ ಬರೆದುಕೊಟ್ಟಿಲ್ಲ ಎಂದು ಹೇಳಿಕೊಂಡು ದಾವೆ ಸಲ್ಲಿಸಿದ್ದೀನ ಎಂದು ನನಗೆ ನೆನಪಿಲ್ಲ. ಮರ್ಕಲ್ ಗ್ರಾಮದ ಕೆ.ಸಿ.ಸುಬ್ಬರಾಯಗೌಡ ಬಿನ್ ಚೆನ್ನಪ್ಪಗೌಡ ಮತ್ತು ಸುಧಾಕರ ಬಿನ್ ಕೇಶವ ರವರ ಪರಿಚಯ ಇದೆಯ ಎಂದರೆ ಸಾಕ್ಷಿಯು ಅಂತಹ ಹೆಸರಿನವರು ಮರ್ಕಲ್ ಗ್ರಾಮದಲ್ಲಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ-1 ರಡಿ ವಾದಿಯ ಹೆಸರನಲ್ಲಿ ಇರುವ ಜಮೀನಿನ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸಾಕ್ಷಿಯು ಸ.ನಂ.5 ಪೋಡಿಯಾಗದೆ ಇರುವ ಕಾರಣ ಹಕ್ಕು ಇದೆಯಾ ಇಲ್ಲವ ಎಂದು ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ದಾವ ಜಮೀನಿನ ಪೋಡಿ ಮಾಡಿಸಿದರೆ ನಿಮಗೆ ತೊಂದರೆ ಇದೆಯ ಎಂದರೆ ಸಾಕ್ಷಿಯು ವಾದಿಯ ಭಲಾಢ್ಯರಾದ ಕಾರಣ ನನಗೆ ತೊಂದರೆಯಾಗುತ್ತದೆ ಎಂದು ನುಡಿಯುತ್ತಾರೆ.

ದಾವ ಜಮೀನಿನ ಪೂರ್ವಕ್ಕೆ ತಿಮ್ಮಮ್ಮ ಮತ್ತು ಇತರರ ಜಮೀನು, ಪಶ್ಚಿಮಕ್ಕೆ ಎಸ್.ಬಿ. ಸಾಲ್ದಾನ ಮತ್ತು ಜೆ.ವಿ. ಸಾಲ್ದಾನ ರವರ ಜಮೀನು, ಉತ್ತರ ದಿಕ್ಕಿಗೆ ಗೌರಮ್ಮ ರವರ 5 ಗುಂಟೆ ಜಮೀನು ಮತ್ತು ದಕ್ಷಿಣಕ್ಕೆ ಸ.ನಂ.5/ಪಿ3 ರ ಉಳಿಕೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ವಾದಪತ್ರದ ಶೆಡ್ಯೂಲ್ ನಲ್ಲಿ ತೋರಿಸಿರುವ ಚೆಕ್ಕುಬಂದಿಯ ಜಮೀನಿನ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವ ಜಮೀನಿನಲ್ಲಿ ಇರುವ ಕೂಲಿಲೈನ್ ಮುಂದೆ ನಾನು ಬಾಳೇಗಿಡ ಹಾಕಿದ್ದೇನೆ ಎಂದರೆ ಸರಿ. ನಾನು ಬಾಳೇಗಿಡ ಹಾಕಿರುವ ಜಾಗಕ್ಕೂ ಕೂಲಿಲೈನ್ ಇರುವ ಜಾಗ 10-15 ಅಡಿಗಳ ಎತ್ತರದಲ್ಲಿ ಇದೆ ಎಂದರೆ

ನನಗೆ ಗೊತ್ತಿಲ್ಲ. ಗದ್ದೆಯನ್ನು ಸಮಮಾಡಿಸಿ ನಾನು ಬಾಳೇಗಿಡ ನೆಟ್ಟಿದ್ದೇನೆ ಎಂದರೆ ಸರಿಯಲ್ಲ. ಸ.ನಂ.5/2 ರಲ್ಲಿ ನನಗೆ ಜಂಟಿ ಖಾತೆ ಇರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದೇನೆ. ನಾನು ಸ.ನಂ.5/2 ರಲ್ಲಿ 2 ಎಕರೆ 9 ಗುಂಟೆ ಹಾಗೂ 5 ಗುಂಟೆ ಜಮೀನುಗಳಲ್ಲಿ ಸ್ವಾಧೀನ ಇದ್ದೇನೆ ಎಂದು ಹೇಳಿರುವ ಸಂಬಂಧ ನಕ್ಷೆಯನ್ನು ಹಾಜರುಪಡಿಸಿಲ್ಲ. ನಾನು ಬಾಳೇಗಿಡ ನೆಡುವ ಕಾಲಕ್ಕೆ ಜಮೀನನ್ನು ಜೆಸಿಬಿ ಯಿಂದ ಸಮ ಮಾಡಿಸಿದ್ದೆ ಎಂದರೆ ಸರಿಯಲ್ಲ. ಆದರೆ ಸಾಕ್ಷಿಯು ಕೂಲಿಯವರನ್ನು ಕರೆಸಿ ಸಮ ಮಾಡಿಸಿದ್ದೆ ಎಂದು ನುಡಿಯುತ್ತಾರೆ. ಆ ಸಮಯಕ್ಕೆ ದಾವ ಜಮೀನು ಹಾಗೂ ನನ್ನ ಜಮೀನಿನ ನಡುವೆ ಬೇಲಿ ಇತ್ತ ಎಂದರೆ ಸಾಕ್ಷಿಯು ಇಂದಿಗೂ ಇದೆ ಎಂದು ನುಡಿಯುತ್ತಾರೆ. ನಾನು ಬಾಳೇಗಿಡ ನೆಡುವ ಕಾಲಕ್ಕೆ ಸದರಿ ಬೇಲಿಯನ್ನು ಕಿತ್ತು ಹಾಕಿದ್ದೆ ಎಂದರೆ ಸರಿಯಲ್ಲ.

ಕಾಫೀ ಎಸ್ಟೇಟ್ ಗಳಲ್ಲಿ ಪಲ್ಪರ್ ಗುಂಡಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವ ಜಮೀನಿನಲ್ಲಿ ಇರುವ ಕೂಲಿಲೈನ್ ಪಕ್ಕದಲ್ಲಿ ಪಲ್ಪರ್ ಗುಂಡಿ ಇತ್ತು ಎಂದು ನಾನು ನೋಡಿಲ್ಲ. ಆ ಪಲ್ಪರ್ ಗುಂಡಿ ಇರುವ ಜಾಗದ ಪಕ್ಕದ ಜಾಗದಲ್ಲಿ ನಾನು ಬಾಳೇಗಿಡ ನೆಟ್ಟಿದ್ದೇನೆ ಎಂದರೆ ಸರಿಯಲ್ಲ. ದಾವ ಜಮೀನನ್ನು ನ್ಯಾಯಾಲಯದಿಂದ ಸರ್ವೇ ಮಾಡಿಸಲು ತೊಂದರೆ ಇದೆಯ ಎಂದರೆ ಸಾಕ್ಷಿಯು ಮುಂದಕ್ಕೆ ತೊಂದರೆಯಾಗುತ್ತದೆ ಎಂದು ನುಡಿಯುತ್ತಾರೆ. ನನ್ನ ಕುಟುಂಬದವರು ಈ ಹಿಂದೆ ವಾದಿಯ ಕುಟುಂಬದವರ ವಿರುದ್ಧ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಆ ದಾವೆಯಲ್ಲಿ ನಾನು ಸಹಾ ವಾದಿಯಾಗಿದ್ದೆ ಎಂದರೆ ಸರಿ. ಸದರಿ ದಾವೆಯಲ್ಲಿನ ಚೆಕ್ಕುಬಂದಿಯನ್ನು ನಾನು ತಾಯಿ ಹೇಳಿ ಬರೆಸಿದ್ದಾರೆ. ನನ್ನ ತಾಯಿ ವಿದ್ಯಾಭ್ಯಾಸ ಮಾಡಿರಲಿಲ್ಲ. ನಾನು ಪಿಯುಸಿ ವರೆಗೂ ಓದಿದ್ದೇನೆ. ನನ್ನ ಸಹೋದರ ಎಂ.ಪಿ. ಮಹೇಶ್ ರವರು ಸಹಾ ವಿದ್ಯಾಭ್ಯಾಸ ಮಾಡಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.